(ಇಂದು ದಿನಾಂಕಃ 06-03-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಆರ್.ಎಸಿ.ಎಚ್.(ಜಿ) ವಕೀಲರಿಂದಃ**

ನಾನು ಕಾರವಾರ ಸಂಕ್ರವಾಡಾದಲ್ಲಿ ವಾಸಿಸುತ್ತೇನೆ. ಅಲ್ಲಿಂದ ಅರ್ಗಾ 6-7 ಕಿ.ಮೀ. ಆಗುತ್ತದೆ. ನಾನು ಸುಮಾರು 25 ವರ್ಷಗಳಿಂದ ಅಲ್ಲಿ ವಾಸಿಸುತ್ತಿದ್ದೇನೆ. ಅರ್ಗಾದಲ್ಲಿ ಇನ್ನೂ ಹಲವರು ವಾಸ್ತವ್ಯ ಇದ್ದಾರೆ. ವಾದಿ ನನ್ನ ಹೆಂಡತಿಯ ಅಕ್ಕ. ನಾನು ಮದುವೆಯಾಗಿ ಸುಮಾರು 15 ವರ್ಷಗಳಾಗಿವೆ. ಅದಕ್ಕೂ ಪೂರ್ವದಲ್ಲಿ ನಮ್ಮ ಕುಟುಂಬಕ್ಕೆ ಹಾಗೂ ವಾದಿಯ ಕುಟುಂಬಕ್ಕೆ ಯಾವುದೇ ಸಂಬಂಧ ಇರಲಿಲ್ಲ. ವಾದಿಯ ಕುಟುಂಬದ ವ್ಯವಹಾರ ಮತ್ತು ನಮ್ಮ ಕುಟುಂಬದ ವ್ಯವಹಾರ ಬೇರೆ ಬೇರೆ. ದಾವಾ ಆಸ್ತಿ ಯಾರು ಯಾರಿಂದ ಖರೀದಿ ಮಾಡಿದ್ದರು? ಯಾವಾಗ ಖರೀದಿ ಮಾಡಿದ್ದರು ಎಂದು ನನಗೆ ಮದುವೆಯಾದ ಮೇಲೆ ಗೊತ್ತಾಯಿತು. ಈ ದಾವೆ ಹಾಕಿ ಒಂದೆರಡು ವರ್ಷಗಳು ಆಗಿವೆ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನಗೆ ಸುಮಾರು 2 ತಿಂಗಳುಗಳ ಹಿಂದೆ ಹೇಳಿದ್ದರು. ದಾವೆ ಯಾವ ಕಾರಣಕ್ಕೆ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇದೆ. ಅದನ್ನು ಮನೆ ಸಲುವಾಗಿ ಹಾಕಿದ್ದಾರೆ. ಜಮೀನು ಭೂಸ್ವಾಧೀನ ಆಗಿ ಎಷ್ಟು ಹಣ ಬಂದಿದೆ ಎಂದು ವಾದಿಯ ಗಂಡ ಹೇಳಿದ್ದರು. ವಾದಿಯ ಗಂಡರವರಿಗೆ ಸಂಬಂಧಿಸಿದ 7 ಕೇಸುಗಳು ಇವೆ. ಒಂದು ಅರ್ಗಾದ್ದು ಮತ್ತು ಅಮದಳ್ಳಿದು. ಅಮದಳ್ಳಿಯ ಕೇಸ ಸಹ ಜಮೀನು ಬಗ್ಗೆ ಇದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ವಾದಿಯರು ಹೇಳಿದ ಮೇರೆಗೆ ಬರೆಯಲಾಗಿದೆ. ವಾದಿಯ ಗಂಡನ ಬಗ್ಗೆ ಹಾಗೂ ಜಮೀನಿನ ಬಗ್ಗೆ ಹಾಗೂ ಪರಿಹಾರ ಹಣದ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಕೋರಿಕೆಯ ಮೇರೆಗೆ ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**
**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ